



ಕಾದಂಬರಿಗಳು ಕನ್ನಡಕ್ಕೆ ಬಂದಿವೆ), ಟೋನಿ ಮಾರಿಸನ್ನಳ 'ಓ ಮರ್ಸಿ' ಮುಂತಾದ ಕಾದಂಬರಿಗಳನ್ನು ಓದಬೇಕು.

ಈ ಕಾದಂಬರಿ ನಮಗೆ ಹತ್ತು ಹಲವು ಪಾತ್ರಗಳ ಒಳಗು–ಹೊರಗಿನ ದ್ವಂದ್ವ, ತಾಕಲಾಟ, ತವಕ, ತಲ್ಲಣಗಳ ಚಿತ್ರಣ ಕೊಡುತ್ತ ಸಾಗುತ್ತದೆ. ಒಂದು ದೊಡ್ಡ ಅವಿಭಕ್ತ ಕುಟುಂಬದ ಪಾತ್ರಗಳೆಲ್ಲ ಇಲ್ಲಿ ಅನಾವರಣಗೊಳ್ಳುತ್ತಿವೆಯೋ ಎಂಬಂತೆ ಸಾಗುವ ಕಥಾನಕಕ್ಕೆ ಏಕಮುಖದ ಕೇಂದ್ರವಾಗಲಿ, ಕಥನದ ಗುರಿಯಾಗಲೀ ಇಲ್ಲ. ಹಾಗಾಗಿ ಇಡೀ ಬದುಕನ್ನು ಅದರ ಸಂಕೀರ್ಣ ಸಮಗ್ರತೆಯೊಂದಿಗೇ ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಇನ್ನಿಲ್ಲದಂತೆ ನಡೆಸುವ ಪ್ರಯತ್ನವೇ ಕಾದಂಬರಿಯ ಯಶಸ್ಸಾಗಿ ಮೂಡಿಬಂದಿದೆ. ಮನುಷ್ಯ ಸಂಬಂಧಗಳ ತಾಕಲಾಟಗಳು, ಮನಸ್ಸಿನ ತೊಳಲಾಟ, ಹಂಬಲ, ಹಪಹಪಿಕೆಗಳು, ಭೌತಿಕ ಜಗತ್ತು ಒಡ್ಡುವ ಆಸೆ, ಆಕಾಂಕ್ಷೆಗಳು ಹುಟ್ಟಿಸುವ ಒತ್ತಡ ಮತ್ತು ನಿರೀಕ್ಷೆಗಳು, ಹಣಬಲ–ಜನಬಲದ ಪಾರಮ್ಯವೇ ಕೆಳವರ್ಗದವರ ಬದುಕನ್ನು ನಿಯಂತ್ರಿಸುವ ಕ್ರೂರ ಮುಖ ಇಲ್ಲಿ ನಮಗೆ ಏಕತ್ರ ಮುಖಾಮುಖಿಯಾಗುವ ಬಗೆ ಅನನ್ಯವಾಗಿದೆ. ಸ್ಥೂಲವಾಗಿ ಇಲ್ಲಿನ ಕಥಾಜಗತ್ತನ್ನು ಪರಿಚಯಿಸುವುದಾದರೆ ಅದನ್ನು ಹೀಗೆ ಮಾಡಬಹುದು:

ಕದ್ದುಮುಚ್ಚಿ ಬಲೂಚಿಸ್ಥಾನ, ಅಫ್ಘಾನಿಸ್ತಾನ ಮತ್ತು ಭಾರತದೊಂದಿಗೆ ಶಸ್ತ್ರಾಸ್ತ್ರ ವ್ಯಾಪಾರ ಮಾಡುತ್ತಿದ್ದವನೊಬ್ಬನ




ಮ್ಯಾನ ಬೂಕರ್ ಪ್ರಶಸ್ತಿಯೊಂದಿಗೆ ಜೋಕಾ ಅಲಹರ್ತಿ